# ಸಿಂಗಾಪುರದ ಮತ್ಸ್ಯಾಗಾರ



**ಏಳು ವಲಯಗಳಲ್ಲಿ ವರ್ಗೀಕರಿಸಲ್ಪಟ್ಟ ಒಟ್ಟು 49 ಹ್ಯಾಬಿಟಟ್‌ಗಳ ಒಂದು ಸಮೂಹವನ್ನೇ ತನ್ನ ಒಡಲೊಳಗೆ ಇಟ್ಟುಕೊಂಡು ಸಂದರ್ಶಕರನ್ನು ಬೆರಗುಗೊಳಿಸಲು ಮೈದಾಳಿ ನಿಂತಿರುವ ಈ ಅಕ್ವೇರಿಯಮ್ ಪ್ರವಾಸಿಗರ ಬಹುದೊಡ್ಡ ಆಕರ್ಷಣೆ.**

**■ ಟಿ. ಗುರುರಾಜಾಚಾರ್ ಜಹಗೀರ್‌ದಾರ್**

ಇಲ್ಲಿ ಅಕ್ವೇರಿಯಂಗಳದ್ದೇ ದೊಡ್ಡದೊಂದು ಮನೆ. ಸಹಸ್ರಾರು ಬಗೆಯ ಮೀನುಗಳನ್ನು ಸಂಗ್ರಹಿಸಿರುವ ಬೃಹತ್ ಮತ್ಸ್ಯಾಗಾರ.

ಸಿಂಗಾಪುರದಲ್ಲಿ ಸೌಥ್ ಈಸ್ಟ್ ಏಷಿಯಾ (ಎಸ್.ಇ.ಎ) ಅಕ್ವೇರಿಯಂ ಎನ್ನುವ ಬೃಹತ್ ಮತ್ಸ್ಯಾಗಾರವಿದೆ. ಅಂತರರಾಷ್ಟ್ರೀಯ ಮನರಂಜನೆ ಹಾಗೂ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಿರುವ ಸೆಂಟೋಸಾ ದ್ವೀಪದ ದಡದಲ್ಲಿ ಇದನ್ನು ನಿರ್ಮಿಸಲಾಗಿದೆ. ಅಕ್ವೇರಿಯಂನಲ್ಲಿ 42.8 ದಶಲಕ್ಷ ಲೀಟರ್‌ಗಳಿಗೂ ಹೆಚ್ಚು ನೀರು ತುಂಬಿದೆ ಎಂದರೆ ಇದರ ಗಾತ್ರವನ್ನು ಊಹಿಸಿ. ಅಂದರೆ, ಒಲಿಂಪಿಕ್ಸ್ ಕ್ರೀಡಾಕೂಟದ 17ಕ್ಕೂ ಹೆಚ್ಚು ಈಜು ಕೊಳಗಳನ್ನು ಈ ನೀರಿನಿಂದ ತುಂಬ ಬಹುದು.

ಇಲ್ಲಿ ಸಿಹಿ ಹಾಗೂ ಉಪ್ಪು ಎರಡೂ ಬಗೆಯ ನೀರನ್ನು ಉಪಯೋಗಿಸಲಾಗಿದೆ. ಆಗ್ನೇಯ ಏಷ್ಯಾದ ಸಾಗರಗಳ ಸುಮಾರು 800 ಮತ್ಸ್ಯಪ್ರಭೇಧಗಳ ಒಂದು ಲಕ್ಷಕ್ಕೂ ಹೆಚ್ಚು ಜಲಚರಗಳು ಇಲ್ಲಿವೆ.

ಅಕ್ವೇರಿಯಮ್‌ನ ದೊಡ್ಡ ಕಟ್ಟಡವನ್ನು ಪ್ರವೇಶಿಸುತ್ತಿದ್ದಂತೆಯೇ ನೆಲದ ಮೇಲೆ ನಿಲ್ಲಿಸಿರುವ ಒಂದು ದೊಡ್ಡ ಕಟ್ಟಿಗೆಯ ಹಡಗು ಸ್ವಾಗತಿಸುತ್ತದೆ. ಅದರ ಹಿಂದೆಯೇ ಅದಕ್ಕಿಂತ ಸಣ್ಣ ಇನ್ನೊಂದು ಹಡಗು ಇದೆ. ಇದನ್ನು ಓಮನ್ ದೇಶವು ಸಿಂಗಾಪುರಕ್ಕೆ ಕಾಣಿಕೆಯಾಗಿ ಕೊಟ್ಟಿದೆ. ಇದರ ವೈಶಿಷ್ಟ್ಯವೆಂದರೆ ಬಿಡಿ ಭಾಗಗಳನ್ನು ಜೋಡಿಸಿ ಇದನ್ನು ತಯಾರು ಮಾಡುವಾಗ ಒಂದು ಮೊಳೆಯನ್ನೂ ಹೊಡೆದಿಲ್ಲ! ಎರಡೂ ಹಡಗುಗಳಿಗೆ ಹೊಂದಿಕೊಂಡು ಪಕ್ಕದಲ್ಲಿಯೇ ಒಂದು ಸಣ್ಣ ಮ್ಯೂಸಿಯಂ ಇದೆ. 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ಪತನದ ನಂತರ, ಪಶ್ಚಿಮ ದೇಶಗಳಿಗೆ ಪೂರ್ವ ದೇಶಗಳಿಂದ ಹೊಸ ಜಲಮಾರ್ಗಗಳನ್ನು ಶೋಧಿಸಲಾದ ಕಥೆಯನ್ನು ಈ ಮ್ಯೂಸಿಯಂ ಹೇಳುತ್ತದೆ.

ಮ್ಯೂಸಿಯಂನ ಕೊನೆಯಲ್ಲಿ ಎರಡು ದಾರಿಗಳಿವೆ. ಒಂದರ ಮೂಲಕ ಕೆಳಗಿಳಿದರೆ ನೇರವಾಗಿ ಅಕ್ವೇರಿಯಮ್‌ನ ಪ್ರವೇಶದ ಟನಲ್ ಮುಂದೆ ಹೋಗಿ ನಿಲ್ಲುತ್ತೇವೆ. ಇನ್ನೊಂದು ದಾರಿ ಈ ಮೊದಲು ಪ್ರಸ್ತಾಪಿಸಿದ ಸಣ್ಣ ಹಡಗಿನ ಹಿಂಬದಿಗೆ ಹೋಗುತ್ತದೆ. ಇಲ್ಲಿ ಇರುವ ಕೌಂಟರಿನಲ್ಲಿ ಮೂರು ಡಾಲರ್ ಕೊಟ್ಟು ಪ್ರವೇಶ ಚೀಟಿಯನ್ನು ಪಡೆದುಕೊಂಡು ಸ್ವಲ್ಪ ಮುಂದೆ ಹೋಗಿ ಎಡಕ್ಕೆ ತಿರುಗಿ ಮೆಟ್ಟಿಲುಗಳನ್ನು ಇಳಿದರೆ ಒಂದು ಸಣ್ಣ ಥಿಯೇಟರನ್ನು ಪ್ರವೇಶಿಸುತ್ತೇವೆ. ಇಲ್ಲಿ ಬೆಂಚುಗಳೇ ಆಸನಗಳು. ಎದುರುಗಡೆ ಒಂದು ದೊಡ್ಡ ಪರದೆ. ನಮ್ಮ ಕತ್ತನ್ನು ಎಡ ಹಾಗೂ ಬಲ ಬದಿಗೆ ತಿರುಗಿಸುತ್ತಾ 7 ನಿಮಿಷಗಳ ಭಯಾನಕ ಷಿಪ್‌ರೆಕ್ ಚಲನಚಿತ್ರವನ್ನು ನೋಡಿದೆವು. ಒಂದು ದೊಡ್ಡ ಹಡಗು ಸಾಗರದ ಮೇಲೆ ಚಲಿಸುತ್ತದೆ. ಇದ್ದಕ್ಕಿದ್ದ ಹಾಗೆ ಗುಡುಗು, ಸಿಡಿಲು, ಮಿಂಚುಗಳ ಸಮೇತ ಕುಂಭದ್ರೋಣ ಮಳೆ ಸುರಿಯಲು ಪ್ರಾರಂಭವಾಗುತ್ತದೆ. ಜೊತೆಗೆ ಬಿರುಗಾಳಿಯ ಹೊಡೆತ. ಕೆಳಗೆ ತೆರೆಗಳ ಅಬ್ಬರ. ಹಡಗು ಜೋರಾಗಿ ಹೊಯ್ದಾಡಲಿಕ್ಕೆ ಶುರುವಾಗುತ್ತದೆ. ಸಿಬ್ಬಂದಿಯ ಜತೆಗೆ ಪ್ರೇಕ್ಷಕರಿರೂ ನಡುಕ. ಮಳೆಯ ತುಂತುರು ಪ್ರೇಕ್ಷಕರಿಗೂ ಸಿಡಿಯುತ್ತದೆ. ನೋಡುವವರೂ ಹಡಗಿನಲ್ಲೇ ಕುಳಿತಿದ್ದೇವೆ ಎನ್ನುವಂತಹ ಅನುಭವ.

ಥಿಯೇಟರಿನಿಂದ ಹೊರನಡೆದರೆ ಎದುರಿಗೆ ನಮ್ಮನ್ನು ತಡೆದು ನಿಲ್ಲಿಸುವುದೇ ಷಿಪ್‌ರೆಕ್ ಹ್ಯಾಬಿಟಟ್. ಯಂತ್ರಚಾಲಿತ ಹಡಗುಗಳನ್ನು ಕಂಡು ಹಿಡಿಯುವುದಕ್ಕಿಂತ ಮುಂಚೆ ಹಿಂದಿನ ಶತಮಾನಗಳಲ್ಲಿ ಸಣ್ಣ ಹಾಗೂ ದೊಡ್ಡ ಹಡಗುಗಳು ಆಘಾತದಿಂದ ಮುಳುಗಿ ಸಾಗರದ ಒಡಲನ್ನು ಸೇರಿದ ಎಷ್ಟೋ ಸಂದರ್ಭಗಳಿವೆ. ಯಂತ್ರಚಾಲಿತ ಹಡಗುಗಳೂ ಮುಳುಗಿದ ಕಡಿಮೆ ಉದಾಹರಣೆಗಳಿವೆ. ಸಾಗರದಿಂದ ಮೇಲೆತ್ತಿದ ಇಂತಹ ಒಂದು ಷಿಪ್‌ರೆಕ್ ಅನ್ನು ಇಲ್ಲಿಟ್ಟು ಒಂದು ದೊಡ್ಡ ಹ್ಯಾಬಿಟಟ್ ಅನ್ನೇ ನಿರ್ಮಿಸಿದ್ದಾರೆ. ಅಪಾರ ಸಂಖ್ಯೆಯಲ್ಲಿ ಮೀನುಗಳ ಸಂಚಾರವನ್ನು ಇಲ್ಲಿ ಕಾಣಬಹುದು.

ಏಳು ವಲಯಗಳಲ್ಲಿ ವರ್ಗೀಕರಿಸಲ್ಪಟ್ಟ ಒಟ್ಟು 49 ಹ್ಯಾಬಿಟಟ್‌ಗಳ ಒಂದು ಸಮೂಹವನ್ನೇ ತನ್ನ ಒಡಲೊಳಗೆ ಇಟ್ಟುಕೊಂಡು ಸಂದರ್ಶಕರನ್ನು ಬೆರಗುಗೊಳಿಸಲು ಮೈದಾಳಿ ನಿಂತಿರುವ ಈ ಅಕ್ವೇರಿಯಮ್ ಒಂದು ದೊಡ್ಡ

